**ದಿನಾಂಕ 8 1 2004 ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು**

**ರಾಜ್ಯದಲ್ಲಿ ಸಕ್ಕರೆ ಮಾರಾಟ ಮಾಡಲು ರಚಿಸಲಾಗಿರುವ ಉನ್ನತ ಮಟ್ಟದ ಸಮಿತಿ ಬಗ್ಗೆ**

209 (564) ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಉತ್ಪಾದನೆ ಆಗಿರುವ ಸಕ್ಕರೆ ಪ್ರಮಾಣ ಎಷ್ಟು

ಆ) ಉತ್ಪಾದನೆಯಾಗಿರುವ ಸಕ್ಕರೆಯಲ್ಲಿ ಕಾರ್ಖಾನೆಗಳು ಮಾರಿರುವ ಸಕ್ಕರೆಯ ಪ್ರಮಾಣವೆಷ್ಟು

ಇ) ರಾಜ್ಯದಲ್ಲಿ ಉತ್ಪಾದನೆಯಾಗಿ ಮಾರಾಟವಾಗದೆ ಸಂಗ್ರಹವಾಗಿರುವ ಸಕ್ಕರೆಯನ್ನು ಏಲೇವಾರಿ ಮಾಡಲು ರಾಜ್ಯ ಸರ್ಕಾರ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆಯೇ

ಈ) ಈ ಸಮಿತಿಯ ವಿವರಗಳೇನು ಇದು ಯಾವಾಗ ಕಾರ್ಯಾರಂಭ ಮಾಡುತ್ತದೆ ಹಾಗೂ ಇದರ ವ್ಯಪ್ತಿಯೇನು

ಉ) ಸಕ್ಕರೆ ಉದ್ಯಮದ ಸಂಕಷ್ಟ ಪರಿಸ್ಥಿತಿಗೆ ನೆರವಾಗಲು ಸರ್ಕಾರ ರೂಪಿಸಿರುವ ಮಾರ್ಗೋಪಾಯಗಳು ಯಾವುವು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಅಂದರೆ 2003–04 ನೇ ಹಂಗಾಮಿನಲ್ಲಿ ದಿನಾಂಕ 30–11–03ರಲ್ಲಿ ಇದ್ದಂತೆ 3 70 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿರುತ್ತದೆ 2003–04 ನೇ ಸಾಲಿನ ಹಂಗಾಮು ಸೆಪ್ಟೆಂಬರ್ 2004 ರವರೆಗೆ ಇದ್ದು ಅಲ್ಲಿಯವರೆಗೆ ಅಂದಾಜು 15 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗುವ ನಿರೀಕ್ಷೆ ಇದೆ

ಆ) ಕಳೆದ 3 ವರ್ಷಗಳಲ್ಲಿ ಸಕ್ಕರೆ ದಾಸ್ತಾನು ಉತ್ಪಾದನೆ ಮಾರಾಟದ ವಿವರ ಈ ತೀರಿ ಇದೆ

(ಲಕ್ಷ ಟನ್‌ಗಳಲ್ಲಿ)

| ಕ್ರ ಸಂ | ಹಂಗಾಮು (ಅಕ್ಟೋಬರ್ ನಿಂದ ಸೆಪ್ಟೆಂ ಬರ್‌ರವರೆಗೆ | ಪ್ರಾರಂಭಿಕ ದಾಸ್ತಾನು | ಉತ್ಪಾದನೆ | ಒಟ್ಟು (3+4) | ಮಾರಾಟ | ಅಂತಿಮ ದಾಸ್ತಾನು |
|---|---|---|---|---|---|---|
| 1 | 2 | 3 | 4 | 5 | 6 | 7 |
| 1) | 2001–02 | 9 74 | 15 60 | 25 34 | 17 04 | 8 30 |
| 2) | 2002–03 | 8 30 | 18 78 | 27 08 | 18 70 | 8 38 |
| 3) | 2003–04 (ನವೆಂಬರ್ 2003 ರವರೆಗೆ) | 8 30 | 3 67 | 11 97 | 2 29 | 9 68 |

ಇ) ರಚಿಸಿಲ್ಲ

ಈ) ಉದ್ಭವಿಸುವುದಿಲ್ಲಾ

ಉ) ರಾಜ್ಯದ ಸಕ್ಕರೆ ಕಾರ್ಖಾನೆಗಳ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಿ ಪರಿಹಾರ ಸೂಚಿಸಿ ವರದಿ ನೀಡುವಂತೆ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ

ಡಿಇ (ಸಿಎಸ್‌ಸಿ 1 2003 ದಿನಾಂಕ 9 1 2003 ರನ್ವಯ ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಅಂತಿಮ ತೀರ್ಮಾನವನ್ನು ಕಾಯಲಾಗುತ್ತಿದೆ

**ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು ರೋಗಗ್ರಸ್ತವಾಗುತ್ತಿರುವುದು**

211 (566) ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು ಪ್ರಸಕ್ತ ಸಾಲಿನಲ್ಲಿ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು ಹಾಗೂ ಉತ್ಪಾದನೆ ಮಾಡಿರುವ ಸಕ್ಕರೆಯ ಪ್ರಮಾಣವೆಷ್ಟು

ಆ) ಈ ಕಾರ್ಖಾನೆಯು ಆರ್ಥಿಕ ಪರಿಸ್ಥಿತಿಯು ದಿನೇ ದಿನೇ ಹದಗೆಟ್ಟು ಕಾರ್ಖಾನೆಯು ರೋಗಗ್ರಸ್ತವಾಗುವ ಹಾದಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಇ) ಈ ಕಾರ್ಖಾನೆಯನ್ನು ಕಾಪಾಡಲು ಸರ್ಕಾರವು ಪುನಶ್ಚೇತನಾ ಕ್ರಮಗಳನ್ನೇನಾದರೂ ಆಲೋಚಿಸಿ ರೂಪಿಸಿದೆಯೇ

ಈ) ರೂಪಿಸಿದಲ್ಲಿ ಇದರ ವಿವರಗಳೇನು, ರೂಪಿಸಲಾಗದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಎಂ ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಮೈಸೂರು ಸಕ್ಕರೆ ಕಾರ್ಖಾನೆಯು ಪ್ರಸಕ್ತ ಸಾಲಿನಲ್ಲಿ ಒಟ್ಟು 279143 00 ಲಕ್ಷ ಮೆ ಟನ್ ಕಬ್ಬನ್ನು ಅರೆದು 2,48,472 ಕ್ವಿಂಟಾಲ್ ಸಕ್ಕರೆಯನ್ನು ಉತ್ಪಾದಿಸಿರುತ್ತದೆ

ಆ) ಗಮನಕ್ಕೆ ಬಂದಿದೆ

ಇ) ಕಾರ್ಖಾನೆಯ ಪುನರ್ ನಿರ್ಮಾಣ ಪುನಶ್ಚೇತನಾ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ

ಈ) ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು

**ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋ ಜನರೇಷನ್ ಘಟಕ ಸ್ಥಾಪನೆ ಕುರಿತು**

212 (567) ಶ್ರೀ ಎಂ ಎಸ್ ಆತ್ಮಾನಂದ (ಮಂಡ್ಯ) ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯದಲ್ಲಿನ ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕೋಜನರೇಷನ್ ಘಟಕ ಸ್ಥಾಪಿಸಲಾಗುತ್ತಿದೆಯೇ

ಆ) ಇದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು ಇದಕ್ಕೆ ಹೂಡಲಾಗಿರುವ ಬಂಡವಾಳದ ಮೂಲಗಳು ಯಾವುವು

ಇ) ಈ ಘಟಕದ ಸ್ಥಾಪನೆಯ ಕಾಮಗಾರಿ ನಿಗಧಿತ ಗುರಿಯಂತೆ ಅನುಷ್ಠಾನಗೊಳ್ಳುತ್ತಿದೆಯೇ ಪ್ರಸ್ತುತ ಇದು ಯಾವಾಗ ಪೂರ್ಣಗೊಂಡು ಈ ಘಟಕ ಎಂದು ಕಾರ್ಯಾರಂಭ ಮಾಡುತ್ತದೆ

ಈ) ಈ ಘಟಕದಿಂದ ಕಾರ್ಖಾನೆಗೆ ನಿರೀಕ್ಷಿಸಲಾಗಿರುವ ಆದಾಯವೆಷ್ಟು?

ಶ್ರೀ ಎಂ ಮಹಾದೇವ್ (ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು)

ಅ) ಹೌದು, ಸ್ಥಾಪಿಸಲಾಗುತ್ತಿದೆ